(ಇಂದು ದಿನಾಂಕಃ 16–10–2024 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಪಾಟೀಸವಾಲು ಃ ಶ್ರೀಮತಿ ಎಸ್ ಎಸ್ ಎಸ್ ವಕೀಲರಿಂದ ಃ -

ನನ್ನ ತಂದೆಯವರು ಕಿಡ್ನಿ ವೈಪಲ್ಯದಿಂದ ಮತ್ತು ಹೃದಯ ಸಂಬಂದ ಖಾಯಿಲೆ ಇದ್ದ ಕಾರಣ 2011 ರಲ್ಲಿ ಹುಬ್ಬಳ್ಳಿಯ ಕೀಮಸ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆಯವರು ರಾಮದುರ್ಗದ ಆಪ್ಟೆ ದವಾಖಾನೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾರೆ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಬರೆಯಲು ಮಾಹಿತಿಯನ್ನು ನಾನೇ ನೀಡಿದ್ದು ಅದರಲ್ಲಿ ಬರೆದ ವಿಷಯಗಳು ನನಗೆ ತಿಳಿದಿದೆ.

ಸಾಕ್ಷಿಗೆ ಈಗ ತನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತೋರಿಸಿ ಅದರಲ್ಲಿ 8 ನೇ ಕಂಡಿಕೆಯಲ್ಲಿ ದಕಾಸ್ತ ಅರ್ಜಿ ಸಂಖ್ಯೆ 120/1992 ರ ಬಗ್ಗೆ ಬರೆಯಲಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ನನ್ನ ವಕೀಲರು ನನಗೆ ಓದಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

ಸದರಿ ಕಂಡಿಕೆಯಲ್ಲಿ ದಕಾಸ್ತ ಅರ್ಜಿ ಸಂಖ್ಯೆ 120/1992 ರ ಬಗ್ಗೆ ನನಗೆ "It is officially learnt that" ಅಂತಾ ನಮೂದು ಮಾಡಲಾಗಿದೆ ಇದು ಯಾವಾಗ ತಿಳಿದು ಬಂತು ಎಂದು ಕೇಳಲಾಗಿ ಸಾಕ್ಷಿ ಅದು ನನ್ನ ತಂದೆಯವರಿಗೆ ಗೊತ್ತಿರುತ್ತದೆ ನನಗೆ ಮಾಹಿತಿ ಇಲ್ಲಾ ಎಂದು ನುಡಿಯುತ್ತಾರೆ.

ಶಂಕರಪ್ಪ ಗುರುಪಾದಪ್ಪ ಗುರಳಹೋಸರು ರವರು ಸೇಲ್ ಸರ್ಟಿಫಿಕೇಟನ್ನು 2011 ರಲ್ಲಿ ಪಡೆದುಕೊಂಡಿರುತ್ತಾರೆ ಆದರೆ ಯಾವ ದಿನಾಂಕ ಎಂದು ನಿಖರವಾಗಿ ಹೇಳಲು ಬರುವುದಿಲ್ಲ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 8 ನೇ ಕಂಡಿಕೆಯಲ್ಲಿ ನನ್ನ ತಂದೆಯವರು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇರುತ್ತಾರೆ ಎಂದು ತೋರಿಸಲು ನಾನು ನ್ಯಾಯಾಲಯದ ಆದೇಶ ಮತ್ತು ತಹಶೀಲ್ದಾರ ರವರ ಆದೇಶವನ್ನು ಹಾಜರು ಪಡಿಸಿರುತ್ತೇನೆ. ನನ್ನ ತಂದೆಯವರ ಜೀವಿತ ಅವಧಿಯಲ್ಲಿ ದಾವಾ ಆಸ್ತಿಯ ಕಬ್ಜಾ ವಹಿವಾಟು ಮಾಡಿಲ್ಲ ಅಂದರೆ ಸರಿಯಲ್ಲ.

ನನ್ನ ತಂದೆಯ ಮರಣದ ನಂತರದಲ್ಲಿ ಪ್ರತಿವಾದಿಯರು ನನ್ನ ವಿರುದ್ಧ ಕಡಲೆ ಬೆಳೆಯನ್ನು ಕಳ್ಳತನ ಮಾಡಿರುವ ಬಗ್ಗೆ ದೂರನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಪೊಲೀಸರು ದೂರನ್ನು ಸ್ವೀಕರಿಸಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಸದರಿ ಬೀಜವನ್ನು ನಾವೆ ಬಿತ್ತಿರುತ್ತೇವೆ ಎಂದು ನುಡಿಯುತ್ತಾರೆ.

ಸದರಿ ಪ್ರತಿವಾದಿಯು ಪೊಲೀಸರು ದೂರನ್ನು ಸ್ವೀಕರಿಸದೇ ಇದ್ದ ಕಾರಣ ನನ್ನ ವಿರುದ್ಧ ಮಾನ್ಯ ನ್ಯಾಯಾಲಯದಲ್ಲಿ ನಿಪಿ-8 ರಂತೆ ಪಿಸಿಆರ್ ಸಂಖ್ಯೆ 04/2014 ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಖಾಸಗಿ ದೂರಿನ ಆದಾರದ ಮೇಲೆ ನವಲಗುಂದ ಗುನ್ನಾ ಸಂಖ್ಯೆ 11/2014 ನಿಪಿ-9 ರಂತೆ ಪ್ರ.ವ.ವ. ದಾಖಲಾಗಿರುತ್ತದೆ ಎಂದರೆ ಸರಿ. ನಿಪಿ-10 ಅಂತಿಮ ವರದಿಯ ಬಗ್ಗೆ ನನಗೆ ಓದಲು ಬರುವುದಿಲ್ಲ ಆದರೆ ವಕೀಲರು ಓದಿ ಹೇಳಿರುತ್ತಾರೆ. ನಿಪಿ-10 ರ ದೋಷರೋಪಣ ಸಾರಾಂಶದಲ್ಲಿ ನಾನು ಪ್ರತಿವಾದಿಯ ಬೆಳೆಯನ್ನು ಕಳ್ಳತನ ಮಾಡಿರುತ್ತೇನೆ ಎಂದು ನಮೂದು ಮಾಡಲಾಗಿದೆ ಅಂದರೆ ಸರಿಯಲ್ಲ. ನಿಪಿ-10 ರ ದೋಷರೋಪಣ ಸಾರಾಂಶದಲ್ಲಿ ಬರೆದಿರುವ ವಿಷಯದ ಬಗ್ಗೆ ನಾನು ಆಕ್ಷೇಪಣೆಯನ್ನು ಸಲ್ಲಿಸಿರುತ್ತೇನೆ.

ಪೊಲೀಸರು ಸಲ್ಲಿಸಿದ ಅಂತಿಮ ವರದಿಗೆ ನಾನು ಯಾವುದೇ ತಕರಾರನ್ನು ಸಲ್ಲಿಸಿಲ್ಲ. ಪೊಲೀಸರು ಅಂತಿಮ ವರದಿ ಸಲ್ಲಿಸಿದ ನಂತರದಲ್ಲಿ ನಾನು ಯಾವುದೇ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿಲ್ಲ ಕಾರಣ ನನ್ನ ಕಬ್ಜಾ ವಹಿವಾಟಿಗೆ ಯಾರು ತೊಂದರೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಇಲ್ಲಿಯವರೆಗೆ ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿರುವುದಿಲ್ಲ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯವರು ಕಬ್ಜಾ ವಹಿವಾಟಿನಲ್ಲಿ ಇದ್ದರು ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ನನ್ನ ತಂದೆಯವರು ಸಲ್ಲಿಸಿದ ಸಿವಿಲ್ ಮಿಸ. ಸಂಖ್ಯೆ 43/2011, ದಕಾಸ್ತ ಅರ್ಜಿ ಸಂಖ್ಯೆ 120/1992 ಹಾಗೂ ಅಸಲು ದಾವಾ ಸಂಖ್ಯೆ 137/1983 ಯಾವ ದಿನಾಂಕದಂದು ಇತ್ಯರ್ಥವಾಗಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನ್ನ ವಕೀಲರಿಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ.

ದಕಾಸ್ತ ಅರ್ಜಿ ಸಂಖ್ಯೆ 120/1992 ದಿನಾಂಕ 31-01-2009 ರಂದು ವಜಾಗೊಂಡಿರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ಮಾಹಿತಿ ನನ್ನ ವಕೀಲರ ಬಳಿ ಇರುತ್ತದೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸಿವಿಲ್ ಮಿಸ. ಸಂಖ್ಯೆ 43/2011, ದಕಾಸ್ತ ಅರ್ಜಿ ಸಂಖ್ಯೆ 120/1992 ಹಾಗೂ ಅಸಲು ದಾವಾ ಸಂಖ್ಯೆ 137/1983 ಗೆ ಸಂಬಂದ ಪಟ್ಟ ದಾಖಲೆಗಳಲ್ಲಿ 2011 ನೇ ಪ್ರಕರಣದ ದಾಖಲೆಗಳನ್ನು ಮಾತ್ರ ನೋಡಿರುತ್ತೇನೆ ಎಂದು ನುಡಿಯುತ್ತಾರೆ. 2011 ನೇ ಪ್ರಕರಣ ಯಾವ ಪ್ರಕರಣ ಎಂದರೆ ನನಗೆ ಗೊತ್ತಿಲ್ಲ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ.

ನನ್ನ ವಾದ ಪತ್ರದ 13 ನೇ ಕಂಡಿಕೆಯಲ್ಲಿ ವಾದಿಯರು ರಾಮದುರ್ಗದ ನಿವಾಸಿ ಎಂದು ನಮೂದು ಮಾಡಿರುತ್ತೇನೆ ಎಂದರೆ ಸಾಕ್ಷಿಯು ಮೂಲವಾಗಿ ನವಲಗುಂದದ ನಿವಾಸಿ ಆದರೆ ಹಾಲಿ ರಾಮದುರ್ಗದ ನಿವಾಸಿ ಎಂದು ನುಡಿಯುತ್ತಾರೆ. ಸದರಿ ವಿಷಯದ ಬಗ್ಗೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಅಥವಾ ವಾದ ಪತ್ರದ ಶಿರೋನಾಮೆಯಲ್ಲಿ ನಮೂದು ಮಾಡಿರುವುದಿಲ್ಲ. ನಾನು ನವಲಗುಂದದ ನಿವಾಸಿ ಅಂತಾ ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ.

ನನ್ನ ತಂದೆಯವರು ತಮ್ಮ ಜೀವಿತ ಅವಧಿಯಲ್ಲಿ ರಾಮದುರ್ಗದಲ್ಲಿ ವಾಸ ಮಾಡಿ ಅಲ್ಲಿಯೆ ಮರಣ ಹೊಂದಿರುತ್ತಾರೆ ಅದೇ ರೀತಿ ನಾನು ಸಹ ರಾಮದುರ್ಗದ ಖಾಯಂ ನಿವಾಸಿ ಅಂದರೆ ಸರಿಯಲ್ಲ.

ನನ್ನ ವಾದ ಪತ್ರದ 13 ನೇ ಕಂಡಿಕೆಯಲ್ಲಿ ಪ್ರತಿವಾದಿಯು ನಾನು ಬೆಳೆಸಿದ ಬೆಳೆಯನ್ನು ನಾಶಪಡಿಸಲು ಪ್ರಯತ್ನ ಪಟ್ಟ ಬಗ್ಗೆ ನಮೂದು ಮಾಡಿರುತ್ತೇನೆ ಅದರ ಬಗ್ಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ನಾನು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇಲ್ಲದೇ ಇದ್ದ ಕಾರಣ ನಾನು ದೂರು ನೀಡಿರುವುದಿಲ್ಲ ಅಂದರೆ ಸರಿಯಲ್ಲ.

ನನ್ನ ವಾದ ಪತ್ರದಲ್ಲಿ 3 ನೇ ವಾದಿಯು ಮೇ 2022 ರಲ್ಲಿ ಹೊಲಕ್ಕೆ ಹೋದಾಗ ಪ್ರತಿವಾದಿಯರು ತೊಂದರೆ ನೀಡಿರುತ್ತಾರೆ ಎಂದು ನಮೂದು ಮಾಡಿರುತ್ತೇನೆ ಅದರ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ.

ನಾವು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇರುವ ಬಗ್ಗೆ ನ್ಯಾಯಾಲಯದಿಂದ ಯಾವುದೇ ಆದೇಶವನ್ನು ಪಡೆದುಕೊಂಡಿಲ್ಲ ಕಾರಣ ಯಾರು ನಮ್ಮ ಕಬ್ಜಾ ವಹಿವಾಟಿಗೆ ತೊಂದರೆ ನೀಡಿದ್ದು ಇರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯು ಸುಮಾರು 10 ಎಕ್ರೆ ವಿಸ್ತೀರ್ಣ ಇರುತ್ತದೆ. ಸಾಕ್ಷಿಯು ಮುಂದುವರೆದು ನಾನು ಶಾಲೆ ಕಲಿತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಮೂಲತಃ ನನ್ನ ತಂದೆಯವರೆಗೆ ಸಂಬಂದ ಪಟ್ಟಿದ್ದು. ಬಸನಗೌಡ ಪಾಟೀಲ ರವರು ನನ್ನ ತಂದೆಯವರೆಗೆ ಹಣ ನೀಡಬೇಕಾಗಿತ್ತು ಸದರಿ ಹಣ ನೀಡಲಾರದೆ ಅವರ ಆಸ್ತಿ ಹರಾಜು ಆಗಿ ನನ್ನ ತಂದೆಯವರು ಹರಾಜಿನಲ್ಲಿ ಖರೀದಿ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಸದರಿ ಹರಾಜಿನಲ್ಲಿ ಖರೀದಿ ಪಡೆದುಕೊಂಡ ನಂತರದಲ್ಲಿ ದಾವಾ ಆಸ್ತಿಯ ಕಬ್ಜಾ ವಹಿಸಿಕೊಡಲು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ಅರ್ಜಿಯ ಸಂಖ್ಯೆ ಹಾಗೂ ಯಾವ ದಿನಾಂಕ

ಎಂದು ಈಗ ನನಗೆ ನೆನಪಿಲ್ಲ. ಸಾಕ್ಷಿಗೆ ಈಗ ತಾನು ಹಾಜರು ಪಡಿಸಿದ ದಾಖಲೆಗಳನ್ನು ಪರಿಶೀಲಿಸಲು ನೀಡಿದಾಗ ಸಾಕ್ಷಿ ನಾನು ಹಾಜರು ಪಡಿಸಿಲ್ಲ ಎಂದು ನುಡಿಯುತ್ತಾರೆ.

ದಕಾಸ್ತು ಅರ್ಜಿ ಸಂಖ್ಯೆ 120/1992 ವಜಾಗೊಂಡ ನಂತರದಲ್ಲಿ ನಾನು ನ್ಯಾಯಾಲಯದ ಗಮನಕ್ಕೆ ಸದರಿ ವಿಷಯವನ್ನು ತರದೆ ಸೇಲ್ ಸರ್ಟಿಫಿಕೇಟನ್ನು ಪಡೆದುಕೊಂಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಮೋಸದಿಂದ ಪಡೆದುಕೊಂಡ ಸೇಲ್ ಸರ್ಟಿಫಿಕೇಟ ಆದಾರದ ಮೇಲೆ ನನ್ನ ತಂದೆಯವರು ದಾವಾ ಆಸ್ತಿಯಲ್ಲಿ ತಮ್ಮ ಹೆಸರು ನಮೂದು ಮಾಡಿಕೊಂಡಿರುತ್ತಾರೆ ಅಂದರೆ ಸರಿಯಲ್ಲ.

ನಾನು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇಲ್ಲದೇ ಇದ್ದರು ಸಹ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಮಾಹಿತಿಯನ್ನು ನೀಡಿ, ದಾವಾ ಕಾರಣ ಉದ್ಭವಿಸದೇ ಇದ್ದರು ಸಹ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

ಪ್ರತಿವಾದಿ ಮತ್ತು ಆತನ ತಂದೆಯವರು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇರುತ್ತಾರೆ ಅಂದರೆ ಸರಿಯಲ್ಲ. ಪ್ರತಿವಾದಿಯ ತಂದೆಗೆ ದಾವಾ ಆಸ್ತಿಯು ಸರ್ಕಾರದಿಂದ ಮಂಜೂರು ಆಗಿ ಬಂದಿರುತ್ತದೆ ಅಂದಿನಿಂದ ಪ್ರತಿವಾದಿಯರು ಮತ್ತು ಆತನ ಕುಟುಂಬದವರು ಸದರಿ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

ನನ್ನ ದಾವೆಯ ಲಗತ್ತು ಹಾತನಕಾಶೆಯನ್ನು ನಾನು ದಾವೆಗೆ ಅನುಕೂಲವಾಗುವಂತೆ ಬಿಡಿಸಿರುತ್ತೇನೆ ಅಂದರೆ ಸರಿಯಲ್ಲ. ಹಾತನಕಾಶೆಗೂ ಮತ್ತು ವಸ್ತು ಸ್ಥಿತಿಗೆ ಯಾವುದೇ ಸಂಬಂದ ಇರುವುದಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**